OS 392/2013
DW-1

ದಿನಾಂಕಃ **03.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**.**

**<u>ಪಾಟೀ ಸವಾಲುಃ  ವಾದಿ ಪರ ಶ್ರೀ ಎ.ಜಿ.ಆರ್. ವಕೀಲರಿಂದಃ</u>**

ಈ ದಾವೆಯನ್ನು ವಾದಿ ಸುರೇಂದ್ರ ನನ್ನ ಮೇಲೆ ದಾಖಲಿಸಿದ್ದಾರೆ. ನಾನು **1** ಲಕ್ಷ ರೂ ಸಾಲ ಪಡೆದುಕೊಂಡಿದ್ದೆ ಆಗ ಖಾಲಿ ಹಾಳೆಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದರು ಆ ಕಾರಣಕ್ಕೆ ಈ ದಾವೆಯನ್ನು ದಾಖಲಿಸಿದ್ದೇನೆ. ನಿವೇಶನ ಸಂಖ್ಯೆಃ **745,** ಅದರ ಉದ್ದ **60** ಅಡಿ **,** ಅಗಲ **40** ಅಡಿ ಆಸ್ತಿಗೆ ಸಂಬಂಧಿಸಿದಂತೆ ಈ ದಾವೆ ದಾಖಲಿಸಿದ್ದಾರೆ. ಸದರಿ ಆಸ್ತಿಯನ್ನು ನಾನು ತಿಮ್ಮಣ್ಣ ಬಿನ್ ತಿಮ್ಮಯ್ಯನವರಿಂದ ಖರೀದಿ ಮಾಡಿದ್ದೇನೆ.

**2.** ದಿನಾಂಕಃ **11.04.2011** ರಂದು ನಾನು ನನ್ನ ಹೆಂಡತಿ ಮತ್ತು ನನ್ನ ಅಪ್ರಾಪ್ತ ಮಕ್ಕಳ ಪರವಾಗಿ ದಾವಾ ಆಸ್ತಿಯನ್ನು ನೋಂದಣಾಧಿಕಾರಿಯವರ ಕಛೇರಿಯಲ್ಲಿ ವಾದಿಗೆ ಮಾರಾಟ ಮಾಡಲು ಕರಾರು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. **2** ಲಕ್ಷಕ್ಕೆ ವ್ಯವಹಾರ ಆಗಿದ್ದು **1** ಲಕ್ಷ **55** ಸಾವಿರ ರೂಪಾಯಿಯನ್ನು ಮುಂಗಡವಾಗಿ ನಾನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಉಳಿದ **45** ಸಾವಿರ ರೂಗಳನ್ನು ಪಡೆದುಕೊಂಡು ನಾನು **2** ವರ್ಷಗಳಲ್ಲಿ ಕ್ರಯಪತ್ರ ಮಾಡಿಕೊಂಡಬೇಕೆಂದು ಕರಾರು ಆಗಿತ್ತು ಎಂದರೆ ಸರಿಯಲ್ಲ. ಆ ರೀತಿ ಕರಾರು ಮಾಡಿಕೊಂಡಿದ್ದರೂ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖಾಲಿ ಹಾಳೆಯ ಮೇಲೆ ಸಹಿ ಮಾಡಿರುವುದಿಲ್ಲ ಆದರೆ ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನಾನು ನನ್ನ ಹೆಂಡತಿ ನಮ್ಮ ಪರವಾಗಿ ಮತ್ತು ನಮ್ಮ ಮಕ್ಕಳಾದ ಅಪ್ರಾಪ್ತ ಮಕ್ಕಳ ಪರವಾಗಿ ವಾದಿಗೆ ಕರಾರು ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

**3.** ಸಾಕ್ಷಿಗೆ ನಿ.ಪಿ. **1** ಅನ್ನು ತೋರಿಸಿ ನಿ.ಪಿ. **1** ರ **1** ನೇ ಪುಟದ ಹಿಂಭಾಗದಲ್ಲಿರುವ ಬಾವಚಿತ್ರ ಯಾರದು ಎಂದರೆ ವಾದಿ ಸುರೇಂದ್ರ ಮತ್ತು ನನ್ನದು. ಸಹಿ ಯಾರದ್ದು ಎಂದರೆ ಸೃಷ್ಟಿ ಮಾಡಿದ್ದಾರೆ. ನಿ.ಪಿ.**1** ರ **2** ನೇ ಮತ್ತು **3** ನೇ ಪುಟದ ಹಿಂಭಾಗದಲ್ಲಿರುವ ಬಾವಚಿತ್ರ ನನ್ನ ಹೆಂಡತಿಯದ್ದು. ನಿ.ಪಿ.**1(ಬಿ)** ನನ್ನ ಹೆಸರು. ನನ್ನ ಮುಖ್ಯ ವಿಚಾರಣಾ

ಪ್ರಮಾಣಪತ್ರದಲ್ಲಿ ನನ್ನ ಸಹಿ ಇದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ **1** ನೇ ಪುಟದಲ್ಲಿರುವ ಸಹಿ ಯಾರದ್ದು ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ಯಾರ ಸಹಿ ಇದೆ ಎಂದು ನನಗೆ ಗೊತ್ತಿಲ್ಲ ನನ್ನ ಸಹಿ ಇರುವುದಿಲ್ಲ. ಮೃತ ವಾದಿಯ ಮಗ **1(ಎ)** ವಾದಿ ನನಗೆ ದಿನಾಂಕಃ **06.04.2013** ರಂದು ಒಂದು ಕಾನೂನು ರೀತ್ಯಾ ನೋಟಿಸ್ ಕೊಟ್ಟು ಕ್ರಯಪತ್ರ ಮಾಡಿಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ದಿನಾಂಕಃ **06.04.2013** ರಂದು ನನಗೆ ನೋಂದಾಯಿತ ಅಂಚೆ ಮೂಲಕ ಅಂಚೆ ಬಂದಿತ್ತು ಎಂದರೆ ಸರಿಯಲ್ಲ. ನಾನು ಯಾವುದೇ ಪ್ರತ್ಯುತ್ತರ ನೋಟಿಸ್ ಕೊಟ್ಟಿರುವುದಿಲ್ಲ.

**4.** ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿದಾಗ ನನ್ನ ಮಗಳು **3** ನೇ ವಾದಿಗೆ **9** ವರ್ಷ ವಯಸ್ಸು. ನಾನು ನಿ.ಪಿ.**1** ಅನ್ನು ಯಾವುದೇ ಬಳಿ ಹಾಳೆಯ ಮೇಲೆ ಸಹಿ ಹಾಕಿರುವುದಿಲ್ಲ ನಾನು ನನ್ನ ಹೆಂಡತಿ ದಾವಾ ಆಸ್ತಿಯನ್ನು ಮಾರಾಟ ಮಾಡಬೇಕೆಂದು ನಮ್ಮ ಪರವಾಗಿ ಮತ್ತು ನಮ್ಮ ಮಕ್ಕಳ ಪರವಾಗಿ ಅವರ ಲಾಲನೆ ಪೋಷಣೆ ಸಲುವಾಗಿ ಕರಾರು ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಕರಾರು ಮಾಡಿಕೊಟ್ಟಿದ್ದರು ಇತ್ತೀಚೆಗೆ ದಾವಾ ಆಸ್ತಿ ಬೆಲೆ ಹೆಚ್ಚಾಗಿರುವುದರಿಂದ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ವಿದ್ಯೆ ಇಲ್ಲದೇ ಇರುವುದರಿಂದ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ಬರೆದಿರುವ ಸಂಗತಿಗಳು ನನಗೆ ಗೊತ್ತು. ನಾನು ಕರಾರು ಪತ್ರ ಮಾಡಿಕೊಟ್ಟಿದ್ದರೂ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿಸದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಮತುತ ನಾನು ನಾನು ನನ್ನ ಹೆಂಡತಿ ನಮ್ಮ ಪರವಾಗಿ ಮತ್ತು ಮಕ್ಕಳ ಪರವಾಗಿ ಹಣ ಪಡೆದುಕೊಂಡು ಸುಳುಳ ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

OS  392/2013
DW-1

**<u>ಮರುವಿಚಾರಣೆ ಇಲ್ಲ.</u>**

**(**ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).**

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ.